8) **ವಿಷಯ:** ಮಧ್ಯಾಹ್ನದ ಬಿಸಿಯೂಟದಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವಿ): ಬಿಹಾರದಲ್ಲಿ ಇತ್ತೀಚೆಗೆ ಒಂದು ಘಟನೆ ಆಯಿತು.

ಅಧ್ಯಕ್ಷರು: ಅದೆಲ್ಲ ಬೇಡ, ಇಲ್ಲಿಯ ವಿಷಯ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಹೇಳುವುದಕ್ಕೆ ಅವಕಾಶ ಕೊಡಿ. ಮೊನ್ನೆ ಬಿಹಾರದಲ್ಲಿ ನಡೆದ ಘಟನೆ ನಮ್ಮೆಲ್ಲರಿಗೂ ಎಚ್ಚರಿಕೆಯ ಗಂಟೆಯಾಗಿದೆ. ಅದಾದಮೇಲೆ ಹಲವಾರು ವರದಿಗಳು ಬಂದಿವೆ. ಹಾವೇರಿ ಜಿಲ್ಲೆ, ಮುಂಡರಗಿ ಜಿಲ್ಲೆಗಳಿಂದ ವರದಿ ಬಂದಿದೆ. ಎಲ್ಲಾ ಪೇಪರ್‌ಗಳಲ್ಲಿ ಪ್ರಮುಖವಾಗಿ ವರದಿಯಾಗಿದೆ. ಇದರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಮಕ್ಕಳ ಮಧ್ಯಾಹ್ನದ ಬಿಸಿಯೂಟಕ್ಕೆ ಯಾವ ರೀತಿಯಾಗಿ ಮಕ್ಕಳ ಸುರಕ್ಷತೆಗೆ ಸರ್ಕಾರ ವಿಶೇಷ ಗಮನ ಹರಿಸಿದೆಯೇ? ಇದಕ್ಕೆ ಯಾರನ್ನು ಜವಾಬ್ದಾರಿ ಮಾಡಿದೆ? ಮುಂದೆ ನಿರ್ವಹಣೆ ಮಾಡುವುದಕ್ಕೆ ಏನಾದರೂ ಸೂಚನೆ ಬದಲಾವಣೆ ಮಾಡುತ್ತೀರಾ? ಅಲ್ಲಿರುವ ಬೇರೆ ಯಾರಿಗಾದರೂ ಅವಕಾಶ ಮಾಡಿಕೊಡುತ್ತೀರಾ? ಅಥವಾ masterಗಳೇ ಅಡಿಗೆ ಮಾಡಿಕೊಡುವ ಪರಿಸ್ಥಿತಿಯಲ್ಲಿದ್ದಾರೆ. ತೊಂದರೆಗಳಿವೆ. ಅದನ್ನು ನಿವಾರಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಬಿಸಿಯೂಟಕ್ಕೆ ಮತ್ತು ಮಕ್ಕಳ ಸುರಕ್ಷತೆಗೆ ಏನು ಕ್ರಮ ತೆಗದುಕೊಳ್ಳುತ್ತೀರಿ ಎಂದು ಸರ್ಕಾರ ಹೇಳಬೇಕು. ಇಲಿ, ಹೆಗ್ಗಣಗಳು ಬಂದಿವೆ. ಇದರ ಬಗ್ಗೆ ಕನ್ನಡಪ್ರಭ, ವಿಜಯವಾಣಿ, ವಿಜಯ ಕರ್ನಾಟಕ ಎಲ್ಲ ಪ್ರಮುಖ ಪತ್ರಗಳಲ್ಲಿ ವರದಿಯಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ತೆಗೆದುಕೊಂಡಿದ್ದರೆ ಅದು ಯಾವ ಕ್ರಮ ಎಂದು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: (ಕಾನೂನು ಮತ್ತು ಸಂದೀಯ ವ್ಯವಹಾರಗಳ ಸಚಿವರು): ಶಾಲಾ ಮಕ್ಕಳಿಗೆ ಕೊಡುತ್ತಿರುವ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯಲ್ಲಿ ಕಲಬೆರೆಕೆ ಪ್ರಕರಣಗಳು ನಡೆಯುತ್ತಿವೆ ಎಂದು ಮಾನ್ಯ ಸಚಿವರ ಗಮನ ಸಳೆದಿದ್ದಾರೆ. ಮಾನ್ಯ ಸಚಿವರು Coucil ನಲ್ಲಿರುವುದರಿಂದ ಇದಕ್ಕೆ ನಾಳೆ ಉತ್ತರ ಕೊಡಿಸುತ್ತೇನೆ.

9) **ವಿಷಯ: ಉಷ್ಣ ವಿದ್ಯುತ್ ಸ್ಥಾವರದ ಬಗ್ಗೆ**

ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಮೂಡಬಿದರೆಯಲ್ಲಿ ಉಷ್ಣ ವಿದ್ಯುತ್ ಸ್ಥಾವರವನ್ನು ಆರಂಭ ಮಾಡುತ್ತೇವೆನ್ನುವ ಉಲ್ಲೇಖವನ್ನು ಬಜೆಟ್‌ನಲ್ಲಿ ಮಾಡಿದ ನಂತರ ದೊಡ್ಡ ಪ್ರಮಾಣದ ಗೊಂದಲಗಳು ಆ ಭಾಗದಲ್ಲಿ ಸೃಷ್ಟಿಯಾಗಿದೆ.

ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರೂ ಕೂಡ ವಿರೋಧ ವ್ಯಕ್ತಪಡಿಸಿದ್ದಾರೆ. ಮೂಡಬಿದರೆಯಲ್ಲಿ ನಿಟ್ಟೋಡಿಯಲ್ಲಿ ಉಷ್ಣ ವಿದ್ಯುತ್ ಸ್ಥಾವರವನ್ನು ಆರಂಭ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ? ಈಗಾಗಲೇ ಸಚಿವರು ಅದಕ್ಕೆ ವಿರೋಧ ವ್ಯಕ್ತ ಮಾಡಿರುವುದರಿಂದ ಜನರಲ್ಲಿ ಈಗಾಗಲೇ ಗೊಂದಲ ಮತ್ತು ಆತಂಕ ಎರಡೂ ನಿರ್ಮಾಣವಾಗಿರುವುದರಿಂದ ಸರ್ಕಾರದ ನಿಲುವೇನು ಎಂದು ತಿಳಿಸಬೇಕು.

ಶ್ರೀ ಸಿದ್ದರಾಮಯ್ಯ: (ಮುಖ್ಯಮಂತ್ರಿಗಳು): ಈಗ ನೋಟೀಸ್ ಕೊಟ್ಟಿದ್ದಾರೆ. ನಾಳೆ ಉತ್ತರ ಕೊಡುತ್ತೇನೆ.

10) ವಿಷಯ: ಬೆಂಗಳೂರಿನ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್: (ಹುಬ್ಬಳ್ಳಿ ಧಾರವಾಡ ಕೇಂದ್ರ): ಬೆಂಗಳೂರಿನ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ 1998–2002ರಲ್ಲಿ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂಬುದು ಈಗಾಗಲೇ enquiry ಯಿಂದ ಹೊರಬಂದಿರುವ ವಿಷಯವಾಗಿದೆ. ಅದರಲ್ಲಿ ಎರಡೂವರೆ ಲಕ್ಷ ಅಲ್ಪಸಂಖ್ಯಾತ ಗ್ರಾಹಕರು ಇದ್ದರು. ಅಂದರೆ 90% ಅಲ್ಪಸಂಖ್ಯಾತರಿದ್ದಾರೆ. ಕೇವಲ 2, 5, 10 ಲಕ್ಷ ರೂಪಾಯಿಗಳ deposit ಇಟ್ಟವರು ಇದ್ದಾರೆ. ಈ ರೀತಿ ಈಗಾಗಲೇ ಆಪದಾನೆ ಬಂದಮೇಲೆ Reserve Bank of India ದವರು ಎಲ್ಲಾ ವ್ಯವಹಾರವನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದರಿಂದ ಆ ಗ್ರಾಹಕರಿಗೂ ತೊಂದರೆಯಾಗಿದೆ. Enquiry ಮಾಡಿದ್ದು, ಸರಿಯಾಗಿ enquiry ಆಗಲಾರದೆ ತೊಂದರೆಯೂ ಆಗುತ್ತಿದೆ. ಇತ್ತೀಚೆಗೆ ರೋಷನ್ ಬೇಗ್‌ರವರು, ಕೇಂದ್ರ ಸಚಿವರಾಗಿದ್ದ ಸಿ.ಎಂ. ಇಬ್ರಾಹಿಂ ರವರು, ಜಾಫರ್ ಷರೀಫ್ ಇವರೆಲ್ಲ delegation ಹೋಗಿ ಭೇಟಿಯಾಗಿ ಸರಿಯಾಗಿ enquiry ಮಾಡಬೇಕೆಂದು request ಮಾಡಿದ್ದಾರೆ.

ಅಧ್ಯಕ್ಷರು: ಅದೆಲ್ಲ ಹೇಳಬೇಡಿ. ಈ allegation ಬಗ್ಗೆ ಏನಾಗಬೇಕು ಅಷ್ಟು ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ನನ್ನ request ಏನೆಂದರೆ, ಈಗ ತಾವು CID ಗೆ ವಹಿಸಿದ್ದೀರಿ. ಅದರಿಂದ ಸರಿಯಾಗಿ enquiry ಆಗುತ್ತಿಲ್ಲ. B report ಕೊಟ್ಟಿದ್ದಾರೆ. ಅಮಾನತ್ ಕೋ–ಆಪರೇಟೀವ್ ಬ್ಯಾಂಕ್‌ನಲ್ಲಿ ನೂರಾರು ಕೋಟಿ ರೂಪಾಯಿ ಅವ್ಯವಹಾರವಾಗಿರುವಂಥದ್ದು ಇದೆ. ದಯವಿಟ್ಟು ಇದನ್ನು CBI ಗೆ ವಹಿಸಬೇಕು.